# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

## <u>ಸ್ಪೆಷಲ್ ಕೇಸ್(ಎನ್.ಡಿ.ಪಿ.ಎಸ್) ಸಂಖ್ಯೆ: 11/2022</u>

ಪಿಡಬ್ಲ್ಯೂ: 06
ಸಿಡಬ್ಲ್ಯೂ: 08

**<u>ದಿನಾಂಕ: 08-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಬಿ.ಆರ್. ಕೃಷ್ಣಸ್ವಾಮಿ |
| ತಂದೆಯ ಹೆಸರು | : ರಾಜಣ್ಣನಾಯ್ಕ |
| ವಯಸ್ಸು | : 53 ವರ್ಷ |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | : ಚಿತ್ರದುರ್ಗ |

**<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>**

ದಿನಾಂಕ **25–07–2019** ರಿಂದ **29–08–2022** ರವರೆಗೆ ನಾನು ಅಬಕಾರಿ ನಿರೀಕ್ಷಕನೆಂದು ಚಳ್ಳಕರೆ ವಲಯದಲ್ಲಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ **06–11–2021** ರಂದು ಈ ಪ್ರಕರಣದ ಕಡತವನ್ನು ಪ್ರಾಸಾ–**5** / ಡಿ.ಬಿ. ಅವಿನಾಶ್ ಇವರಿಂದ ಪಡೆದೆ. ದಿನಾಂಕ **01–12–2021** ರಂದು **1** ಹಾಗೂ **2** ನೇ ಆರೋಪಿತರ ಊರಾದ ಕೊನಿಗರಹಳ್ಳಿಗೆ ಹೋಗಿ ಅವರ ಬಗ್ಗೆ ವಿಚಾರಿಸಲಾಗಿ ಗ್ರಾಮಸ್ಥರು ಆ ಇಬ್ಬರೂ ಆರೋಪಿತರು ಗಾಂಜಾ ಗಿಡಗಳನ್ನು ಬೆಳೆದು ಮಾರಾಟ ಮಾಡುತ್ತಿರುವ ವಿಷಯವನ್ನು ನಮಗೆ ತಿಳಿಸಿದರು. ಸರ್ವೆ ನಂ.**24/102** ರ ಜಮೀನಿನ ದಾಖಲೆ ಒದಗಿಸುವಂತೆ ದಿನಾಂಕ **21–02–2022** ರಂದು ತಹಶೀಲ್ದಾರ್**,** ಚಳ್ಳಕೆರೆ ಇವರಿಗೆ ಪತ್ರ ಬರೆದೆ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–**11** ಎಂದು ಗುರುತಿಸಲಾಯಿತು. ದಿನಾಂಕ **18–03–2022** ರಂದು ತಹಶೀಲ್ದಾರ್ ರವರಿಂದ ಪ್ರತ್ಯುತ್ತರ ಬಂದಿದ್ದು ಅವರು ಸರ್ವೆ ನಂ.**24/102** ರಲ್ಲಿ **10** ಎಕರೆ **27** ಗುಂಟೆ ಲಿಂಗಪ್ಪ ಬಿನ್ ಬೊಮ್ಮಪ್ಪ ಇವರ ಹೆಸರಿನಲ್ಲಿರುವುದಾಗಿ ತಿಳಿಸಿದರು. ಅಲ್ಲದೇ ಸರ್ವೆ ನಂ.**102/1** ರಲ್ಲಿ **2** ಎಕರೆ **33** ಗುಂಟೆ ಎಲ್. ರಾಕೇಶ್ ಬಿನ್ ಲಕ್ಷ್ಮಣ ಹಾಗೂ ಸರ್ವೆ ನಂ.**102/2** ರಲ್ಲಿ **2** ಎಕರೆ **33** ಗುಂಟೆ ರಕ್ಷಿತ್ ಬಿನ್ ಲಕ್ಷ್ಮಣ ಇವರ ಹೆಸರಿಗೆ ದಾಖಲಾಗಿರುತ್ತದೆಂದು ತಿಳಿಸಿದರು. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–**12** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–**1** ರಿಂದ **4** ಹಾಗೂ **7** ಇವರ ಹೇಳಿಕೆಗಳನ್ನು ಮಾಡಿಕೊಂಡೆ. ತನಿಖೆ ಮುಕ್ತಾಯವಾಗಿದ್ದು ದಿನಾಂಕ **19–03–2022** ರಂದು ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಪಹಣಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**13** ರಿಂದ **15** ಎಂದು ಗುರುತಿಸಲಾಯಿತು. ಆ ಕುರಿತು ತನಿಖಾ ವರದಿಯನ್ನು ಕೂಡಾ ಸಲ್ಲಿಸಿದ್ದೇನೆ.

**ಪಾಟೀ ಸವಾಲು: ಶ್ರೀ ಎನ್.ಜಿ.ಕೆ ವಕೀಲರಿಂದ ಆರೋಪಿತರ ಪರವಾಗಿಃ**

**2.** ನಾನು ವಿಚಾರಣೆ ಮಾಡಿದ ಆ ಕೊನಿಗರಹಳ್ಳಿಯ ಗ್ರಾಮಸ್ಥರುಗಳನ್ನು ದೋಷಾರೋಪಣ ಪತ್ರದಲ್ಲಿ ಸಾಕ್ಷಿದಾರರಾಗಿ ತೋರಿಸಿಲ್ಲ. ನಾನು ಆ ಗ್ರಾಮಕ್ಕೆ ಹೋಗಿದ್ದೆ, ಅಲ್ಲಿ **1** ಮತ್ತು **2** ನೇ ಆರೋಪಿತರ ಬಗ್ಗೆ ವಿಚಾರಣೆ ಮಾಡಿದೆ ಮತ್ತು ಗ್ರಾಮಸ್ಥರು ಅವರ ಹಿನ್ನೆಲೆ ಬಗ್ಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಿನಾಂಕ **01–12–2021** ರಂದು ಸರ್ವೆ ನಂ.**24** ಮತ್ತು **102** ರ ಜಮೀನಿಗಳಿಗೆ ಬೇಟಿ ನೀಡಿದಾಗ ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ವಿಚಾರಿಸಿ **1** ಮತ್ತು **2** ನೇ ಆರೋಪಿತರು ಗಾಂಜಾವನ್ನು ತಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದರೂ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿಲ್ಲ. ಪಂಚರಾದ ತಿಪ್ಪಣ್ಣ ಹಾಗೂ ಬಸವರಾಜ್ ಇಬ್ಬರೂ ಚಳ್ಳಕೆರೆ ತಾಲ್ಲೂಕಿನ ವಾಸಿಗಳು ಎನ್ನುವುದು ನಿಜ. ಅಲ್ಲದೇ ದಾಳಿ ಮಾಡಿದೆವೆಂದು ಹೇಳಲಾದ ಕಾಲಕ್ಕೆ ಬಾಗಿಯಾದಂತಹ ನಮ್ಮ ಸಿಬ್ಬಂದಿಗಳು ಚಿತ್ರದುರ್ಗ ಟೌನ್ ನ ಖಾಯಂ ವಾಸಿಗಳು ಎನ್ನುವುದು ನಿಜ. ದಿನಾಂಕ **21–02–2022** ರಂದು ಸದರಿ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ಕೊಟ್ಟಿದ್ದಾರೆನ್ನುದು ನಿಜ. ಘಟನೆ ನಡೆಯಿತೆಂದು ಹೇಳಲಾದ ದಿನಕ್ಕೂ ಮತ್ತು **21–02–2022** ಕ್ಕೂ ಸುಮಾರು ನಾಲ್ಕೂವರೆ ತಿಂಗಳ ಅಂತರವಿದ್ದು ಯಾವ ಕಾರಣಕ್ಕಾಗಿ ಅಷ್ಟು ವಿಳಂಬವಾಗಿ ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಳ್ಳಲಾಯಿತು ಎಂಬ ಬಗ್ಗೆ ಅವರು ವಿವರಣೆ ನೀಡಿಲ್ಲ ಮತ್ತು ನಾನು ಪಡೆದಿಲ್ಲ. ಜಪ್ತಾದ ಗಾಂಜಾವನ್ನು ನಾವು ನಮ್ಮ ಠಾಣೆಯ ಮಾಲ್ಕಾನ ರಿಜಿಸ್ಟರಿನಲ್ಲಿ ದಾಖಲಿಸಿ ಅದನ್ನು ಸೂಕ್ತ ಭದ್ರತೆಯಲ್ಲಿಡಬೇಕು ಎನ್ನುವುದು ನಿಜ. ಸದರಿ ಮಾಲ್ಕಾನ ರಿಜಿಸ್ಟರನ್ನಾಗಲೀ ಅಥವಾ ಅದರ ಪ್ರತಿಯನ್ನಾಗಲೀ ಕೇಸಿನಲ್ಲಿ ಹಾಜರುಪಡಿಸಿಲ್ಲ. ಸದರಿ ಮಾಲ್ಕಾನೆಯ ನಿರ್ವಹಣೆಯನ್ನು ಮಾಡುವ ಸಿಬ್ಬಂದಿಯ ಹೇಳಿಕೆಯನ್ನು ಮಾಡಿಕೊಂಡಿಲ್ಲ. ದಿನಾಂಕ **04–10–2021** ರಂದು ಮಾದಕ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾಗ್ಯೂ ದಿನಾಂಕ **21–02–2022** ರಂದು ಅದನ್ನು ವಿಳಂಬವಾಗಿ ವಿಶ್ಲೇಷಣೆಗೆ ಏಕೆ ಕಳುಹಿಸಿಕೊಡಲಾಯಿತು ಎಂಬ ಬಗ್ಗೆ ಹೇಳಿಕೆ ಮಾಡಿಕೊಂಡಿಲ್ಲ.

**3.** ನಿಪಿ–**13** ರಿಂದ **15** ಇವುಗಳಲ್ಲಿ **2** ನೇ ಆರೋಪಿತನ ಹೆಸರನ್ನು ಮಾಲೀಕನಾಗಲೀ ಅಥವಾ ಅನುಭವದಾರನಾಗಲೀ ಎಂದು ತೊರಿಸಿಲ್ಲ ಎನ್ನುವುದು ನಿಜ. **2** ರಿಂದ **4** ನೇ ಆರೋಪಿತರು ಸರ್ವೆ ನಂ.**102** ರಲ್ಲಿ ಗಾಂಜಾ ಬೆಳೆದ ಬಗ್ಗೆ ಆ ಜಮೀನಿನ ಅಕ್ಕಪಕ್ಕದ ಜಮೀನುಗಳು ಮಾಲೀಕರ ಅಥವಾ ಅನುಭವದಾರರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ. ಜಪ್ತಿ ಕಾಲಕ್ಕೆ ಪ್ರಾಸಾ–**5** ತೆಗೆಸಿದಂತಹ ಪೊಟೋಗಳನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿದ್ದೇನೆ. ಆರೋಪಿತರು ಸರ್ವೆ ನಂ.**24** ರಲ್ಲಾಗಲೀ ಅಥವಾ **102** ರಲ್ಲಿ ಗಾಂಜಾವನ್ನು ಬೆಳೆದಿರುವುದು ನನ್ನ ತನಿಖೆಯಲ್ಲಿ ಕಂಡುಬಂದಿಲ್ಲ ಆದಾಗ್ಯೂ ಕೂಡಾ ನಾನು ಅವರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಕೊಟ್ಟಿಗೆ ಗೊಬ್ಬರವನ್ನು ಹಾಕುವಾಗ ಬೀಜಗಳು

ಸಿಡಿದು ನೈಸರ್ಗಿಕವಾಗಿ ಗಾಂಜಾ ಗಿಡಗಳು ಬೆಳೆದಿರುವ ಸಾಧ್ಯತೆಯನ್ನು ಹೊರತುಪಡಿಸಿ ಆರೋಪಿತರು ತಾವಾಗಿಯೇ ಆ ಗಿಡಗಳನ್ನು ಬೆಳೆಸಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.